ಸಾಲದ ಪಟ್ಟಿ.

ನಂಬರ್.	ಲೇಣೀದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ವಜೀ ಮೊದಲಾದ ವಿವರ.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಯಿದ್ದರೆ.	ಷರಾ.
1	ದಾವಣಗೆರೆ ದೊಡ್ಡಕಟ್ಟ ...	31—0—0	..	ಡಿಕರೀ ಬಾಬತು	
2	ಕುಂಭಕೋಣದ ಸುಬ್ಬರಾಯಾರಿ ..	561—0—0	..	ಡಿಟೋ	
4	ನಾಟನಹಳ್ಳಿ ಪರ್ವತಮ್ಮ ..	65—0—0	...	ಡಿಟೋ	
		657—0—0			

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಆಫೀಸಿನಿಂದ.

ತಾರೀಖು 15ನೇ ಜುಲೈ 1889.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಫ್ರೆಂಚ್‌ರಾಕ್ಸ್ ಸಬ್ ಡಿವಿಜ್ ಮಳವಳ್ಳೀ ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನು ಜವಾಯಿಸಿಕೊಳ್ಳತಕ್ಕ ಹಕ್ಕುದಾರೀ ಮಳವಳ್ಳೀ ತಾಲ್ಲೂಕು ಕಚ್ಚೇರಿಯಲ್ಲಿ, ಸ್ಯ 1889ನೇ ಇಸವಿ ಆಗಸ್ಟು ತಾರೀಖು 17ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

2. ಅಮಲ್ದಾರ್ರು ಅಥವಾ ಶರಸ್ತೇದಾರ್ರು ಹರಾಜು ಮಾಡಿಸುವರು.

3. ಈ ಹರಾಜಿನ ಚಡದರಖಾಸ್ತು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೆಬರವರಿಂದ ಮಂಜೂರ್ಮಾಡುವ ಪರಿಯಂತರ ಕಾಯಂ ಆದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು 1890ನೇ ಇಸವಿ ಮಾರ್ಚಿ ತಾರೀಖು 31ರ ವರಿಗೆ ಜಾರಿಯಲ್ಲಿ ಯಿರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೀಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ಡಿಪಾಜಿಟ್ ಯಿಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟ ನಂಗತಿ ಸಬ್ ಡಿವಿಜ್ ಆಫಿಸರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲ್ 7 ದಿವಸದ ವಳಗಾಗಿ ಕ್ರಯದ ಒಟ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಆಣೆಯಂತೆ ಆಗುವ ಲೋಕಲ್‌ಸೆಸ್ ದೇಖೀಲ್ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಯಿಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು, ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರೂ ಅಥವಾ ಬಾಕಿ ಕ್ರಯದ ಮೊಬಲಗು ಪಾವತಿ ಮಾಡದಿದ್ದರೂ ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗೂ ಮತ್ತು ಲುಕ್‌ಸಾನಿಗೂ ವಳಪಟ್ಟು ಪುನಹಾ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

1. ಹಿಡವಳೀ ಜಮೀನಿನಲ್ಲಿ ಯಿರತಕ್ಕ ಕಲ್ಲುಗಳನ್ನು ತೆಗದುಕೊಳ್ಳಬೇಕಾದರೆ ಹಿಡವಳೀದಾರನ ಸಮ್ಮತಿಯನ್ನು ಪಡೆಯಬೇಕು ಜಮೀನು ಹಿಡುವಳೀದಾರರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲೂ ಕೂಡದು. ಇಜಾರ್‌ದಾರನಿಗೆ ಮಾರಬೇಕೇ ಹೊರ್ತು ಇತರ ಜನಗಳಿಗೆ ಮಾರಲೂ ಕೂಡದು.

2. ಇಜಾರೇದಾರನು ಪುಲ್ಲುಬನ್ನೀ ಇಜಾರೇದಾರರ ಚರಾನ್ಗೆ ಜಕ್ಕಿನಲ್ಲಿ ಪ್ರವೇಶಿಸಕೂಡದು.

3. ಬಂಜರ್ ಜಮೀನ್‌ಗಳು ಸಾಗುವಳೀ ಬಗ್ಯೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಇಜಾರ್‌ದಾರನು ಅಡ್ಡೀ ಹೇಳಕೂಡದು, ಅಂಥಾ ಜಮೀನ್‌ಗಳಲ್ಲಿ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳತಕ್ಕ ಹಕ್ಕು ಮಾತ್ರ ಇಜಾರ್‌ದಾರನಿಗೆ ವುಳ್ಳದು ಯಿರುತ್ತೆ.

4. ಇಜಾರ್‌ದಾರನು ಕಲ್ಲುಗಣಿಗೋಸ್ಕರ ಜಮೀನ್‌ಗಳನ್ನು ಅಗಿಯಲೂ ಕೂಡದು ಒಂದು ವೇಳೆ ಹಾಂಗೆ ಅಗದಲ್ಲಿ ಆ ಗುಂಡಿಗಳನ್ನು ತಕ್ಷಣ ಮುಚ್ಚಿ ಬಿಟ್ಟು ಸಾಗುವಳಿಗೆ ಜಮೀನ್ ಆಯಖು ಯಿರುವಹಾಗೆ ಮಾಡಬೇಕು.

ತಾರೀಖು 15ನೇ ಜುಲೈ 1889.

ಇದರಿಂದ ತಿಳಿಯಪಡಿಸುವದೇನಂದರೆ, ಫ್ರೆಂಚ್‌ರಾಕ್ಸ್ ಸಬ್ ಡಿವಿಜನಿಗೆ ಕೇರಿದ ಮಂಡ್ಯದ ಸಬ್ ರಜಿಸ್ಟ್ರಾರ್ ಆಫಿಸಿನಲ್ಲಿ ಯಾವದು ವರುಷಗಳ ಅಧಿಕ ಕಾಲದಿಂದ ಬೇವಾರಸಾಗಿ ನಿಂತಿರುವ ಇದರಡಿಕಂಡ ದಸ್ತಾವೇಜನ್ನು ದಾಖಲ್ಮಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಪಡೆದ ಪ್ರತಿನಿಧಿಗಳೇ ಆಗಲಿ ಈ ಇಸ್ತಿಹಾರ್ ತಾರೀಖು ಲಾಗಾಯತು ಒಂದು ತಿಂಗಳೊಳಗೆ ಮಂಡ್ಯದ ಸಬ್ ರಜಿಸ್ಟ್ರಾರ್ ಆಫಿಸಿನಲ್ಲಿ ಹಾಜರಾಗಿ ವಾಪಸ್ ಪಡೆಯಬೇಕು, ಇದಕ್ಕೆ ತಪ್ಪಿದರೆ 1877ನೇ ಇಸವಿ ರಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್.	ದಸ್ತಾವೇಜಿನತಾರೀಖು	ದಸ್ತಾವೇಜು ಹಾಜರ್ಕೆ ಮಾಡಿದ ತಾರೀಖು.	ದಸ್ತಾವೇಜು ರಿಜಿಸ್ಟರ್ ಮಾಡಿದ ತಾರೀಖು.	ದಸ್ತಾವೇಜನ್ನು ಬರೆದುಕೊಟ್ಟವನ ಹೆಸರು.	ದಸ್ತಾವೇಜನ್ನು ಬರೆಸಿಕೊಂಡವನ ಹೆಸರು.	ದಸ್ತಾವೇಜಿನ ಸ್ವಭಾವ.	ಷರಾ.
262 / 86—87	31—1—87	4—2—87	4—2—87	ಆತಗೂರು ಹೋಬಳಿ ಬೊಡ್ಡಂಕನಹಳ್ಳಿ ವಕ್ಕಲಿಗರ ಬೆಟ್ಟ ವುರಫ್ ಬೆಟ್ಟೆ.	ಹೆಬ್ಬಳಲ್ಲಿರುವ ಚನ್ನಪ್ಪನವರ ಮಗ ಕಾನುಭೋಗ ಸಂಜಪ್ಪ.	ತನ್ನ ಜಮೀನು ಮತ್ತು ಮನೆ ಸಹ 150 ರೂಪಾಯಿಗೆ ಅಧಾರ ಮಾಡಿಧ ಈ ಮೊಲಲಗ್ಯೆ ಕೀಕಡಾ ಮಾಹೆಯಾನಾ ವಂದು ರೂಪಾಯಿನ ವೇರಿಗೆ ಎಡ್ಡಿ ಆಸಲು ಸಹಾ ಒಂದು ವರುಷದಲ್ಲಿ ಪಾವತಿ ಮಾಡುವ ಹಾಗೆ.	

ಬಿ. ತಿರುಮಲಾಚಾರ್,
ಫೈಂಚ್‌ರಾಶ್ಸ್ ಸಬ್ ರಿಜಿಸ್ಟ್ರಾರ ಆಫಿಸರ್.

ಗವರ್ಮೆಂಟ್ ತಯಾರೀ ಬಾಟಲು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನ್ಯೆಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವೆ ಧರ್ಮಾರ್ಥವಾಗಿ ಗವರ್ಮೆಂಟ್ ಆಫಿಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಬಾಟಿಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡ್ನ ಸೂಪರ್‌ಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ದಬ್ಬಿಗೆ ರೂ. 7—4—0; ಒಂದು ಪೌ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡ್ನ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಒಂದಕ್ಕೆ ರೂ. 4—14—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0, ಒಂದು ಪೌವುಳ್ಳ ಡಬ್ಬಿಗೆ 17 ರೂ. 8ಆಣೆ; ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ವ ನೇಟೀವ್ ಮದ್ದಿನಂಗಡಿಯವರಿಂದ ನೂರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಗಲೂ, ಒಂದು ಪೌ ಡಬ್ಬಿಗೆ ಹನ್ನೆರಡು ಆಣೆ ಹಾಗಲೂ ಕೊಡಬೇಕು.

ಸ್ವಂತ ಪ್ರಕಟಣೆ.

ಮುಳಬಾಗಿಲ್ ಶ್ರೀ ಅಂಜನೇಯಸ್ವಾಮಿ ಕಂಪೆನಿ ಲಿಮಿಟೆಡ್.

ಕಂಪೆನೀ ಮಜಕೂರ ಸಮಸ್ತ ಷೇರ್‌ದಾರ್ರಿಗೂ ಶ್ರುತಪಡಿಸುವದೇನಂದರೆ,—

26—7—89ನೇ ಬುಧವಾರ ನಡದ ಜನರಲ್ ಮೀಟಿಂಗಿನ ಪ್ರೋಸೀಡಿಂಗ್ಸನ್ನು ಕಾಯಂ ಮಾಡತಕ್ಕ ಬಗ್ಯೆ 10—8—89ನೆ ಶನಿವಾರ ಮಧ್ಯಾಹ್ನ 2 ಘಂಟೆಗೆ ಕಂಪನಿಗೆ ದಯಮಾಡಿಸಬೇಕು.

29—7—89ನೇ ಇಸವಿ ಮುಳಬಾಗಿಲ್. ಯೇಜಮಾ ಕಂಚಯ್ಯ.

Mysore Govt. Central Press, Bangalore.—1889.